ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು
**ಸಿ.ಸಿ. ನಂ. 702/2017**
ಸಿ.ಡಬ್ಲೂ-**1** ಪಿ.ಡಬ್ಲೂ **-1**

ದಿಃ **12.06.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ದೀವಾಕರ |
| ಗಂಡ/ತಂದೆಯ ಹೆಸರು | ಲೇಟ್ ಸಾಕೇಗೌಡ |
| ವಯಸ್ಸು | ಸುಮಾರು **45** ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ಸಣ್ಣೇಗೌಡರ ಕಾಲೋನಿ |

## ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಆರೋಪಿತರು ನನ್ನ ಮಾವ ಮತ್ತು ಅತ್ತೆ. ಚಾಸಾ-**2** ನನ್ನ ಅಣ್ಣ. ಮೇ **2017** ರಂದು ನಾನು ಬೆಳಿಗ್ಗೆ **8.00-9.00** ಗಂಟೆ ಸಮಯದಲ್ಲಿ ನಮಗೆ ಸೇರಿದ ಜಮೀನಿನ ಸ.ನಂ.**313, 317, 318** ರಲ್ಲಿ ಆರೋಪಿತರು ಸಸಿ ನೆಡಲು ಬಂದಿದ್ದರು. ಆಗ ನಾವು ನಮ್ಮ ಜಮೀನಿನಲ್ಲಿ ಸಸಿ ನೆಡಬೇಡಿ ಎಂದು ಹೇಳಿದೇವು. ಆಗ ಆರೋಪಿತರು ಕೆಟ್ಟದಾಗಿ ಬೈದರು.

ಮಾರನೇ ದಿನ ಬೆಳಿಗ್ಗೆ **5.00** ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-**2** ರವರು ದನ ಹೊಡೆದುಕೊಂಡು ಹೋಗಬೇಕಾದರೆ ಆರೋಪಿತರು ನಮ್ಮನ್ನು ಅಡ್ಡಗಟ್ಟಿ, **2** ನೇ ಆರೋಪಿ ನೀಲಗಿರಿ ದೊಣ್ಣೆಯಿಂದ ನನ್ನ ಬಲ ಬುಜಕ್ಕೆ ಹೊಡೆದಿರುತ್ತಾರೆ. **1** ನೇ ಆರೋಪಿ ಕಳಾರಿಯಿಂದ ನನ್ನ ತಲೆಯ ಬಲಭಾಗಕ್ಕೆ ಹೊಡೆದಿರುತ್ತಾರೆ. ಮಹಾದೇವ ಕಲ್ಲಿನಲ್ಲಿ ನನ್ನ ಬೆನ್ನಿಗೆ ಹೊಡೆದಿರುತ್ತಾನೆ. ಆಗ ಚಾಸಾ-**4** ರವರು ಜಗಳ ಬಿಡಿಸಿರುತ್ತಾರೆ. ನಂತರ ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಬಂದಿದ್ದು, ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್. ಆಸ್ಪತ್ರೆ ಮೈಸೂರಿಗೆ ಹೋಗಿರುತ್ತೇನೆ.

ನಂತರ ನಾನು ಮೇ **2017** ರಲ್ಲಿ ದೂರು ದಾಖಲಿಸಿರುತ್ತೇನೆ. ಗಲಾಟೆಯಾದ **3** ದಿನಗಳ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದು, ನಾನು ಸ್ಥಳದಲ್ಲಿ ಹಾಜರಿದ್ದು, ತೋರಿಸಿದ ಜಾಗದಲ್ಲಿ ಪೊಲೀಸರು ಸಂಜೆ

**4.30** ರಿಂದ **5.30** ಗಂಟೆಯವರೆಗೆ ಚಾಸಾ-**3** ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ, ದೊಣ್ಣೆ ಕಲ್ಲು ಮತ್ತು ಕಳಾರಿಯನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸಾಕ್ಷಿಗೆ ಲಿಖಿತ ದೂರು ಮತ್ತು ಮಹಜರ್ ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-**1** ಮತ್ತು **2** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**1**(ಎ) ಮತ್ತು **2**(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಸ.ಅ ರವರು ದೊಣ್ಣೆ ಕಲ್ಲು ಮತ್ತು ಕಳಾರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಕಾಲಾವಕಾಶ ಕೋರಿದ್ದು, ಮುಂದುವರೆದು ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು).**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.